ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ
ಸಿಸಿ.ನಂ.709/2022

| | | | |
|---|---|---|---|
| ಸಾಕ್ಷಿಯ ಹೆಸರುಃ | ಸತೀಶ್ | ಚಾಸಾ ಃ | 3 |
| ತಂದೆಯ ಹೆಸರುಃ | ತಮ್ಮೇಗೌಡ | ಪ್ರಾಸಾಃ | 2 |
| ವಯಸ್ಸುಃ | 56 ವರ್ಷ | | |
| ಉದ್ಯೋಗಃ | ವ್ಯವಸಾಯ | | |
| ವಾಸಃ | ಕುಡಿನೆಲ್ಲಿ, ಹಾಲ್ಮತ್ತೂರು ಗ್ರಾಮ ,ಕೊಪ್ಪ ತಾಲೂಕು | | |

ದಿನಾಂಕಃ 06/12/2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಃಃಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಸಹಿ ಮಾತ್ರ ಮಾಡಿರುತ್ತೇನೆ. ಈಗ ನೋಡುತ್ತಿರುವ ಸಹಿ ನನ್ನದಾಗಿರುತ್ತದೆ. ಈಗಾಗಲೇ ಗುರುತಿಸಲಾಗಿರುವ ನಿಪಿ-1 ರ ಸ್ಥಳ ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಸುಮಾರು ಎರಡುವರೆ ವರ್ಷಗಳ ಹಿಂದೆ ಹರಿಹರಪುರ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ.1 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ.1 ನ್ನು ಯಾವ ವಿಷಯಕ್ಕೆ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ ಮತ್ತು ನನ್ನ ಸಮಕ್ಷಮದಲ್ಲಿ ಏನನ್ನೂ ಅಮಾನತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಪರಿಚಯ ಇರುತ್ತಾರೆ. ಅವರು ನಮ್ಮ ಊರಿನವರು.

ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಶೋಧನಾ ವಾರಂಟಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ನಿಪಿ-2 ಕ್ಕೆ ನಾನು ಸಹಿಯನ್ನು, ನಿಪಿ-1 ಕ್ಕೆ ಮಾಡುವ ಸಮಯದಲ್ಲಿ ಮಾಡಿರುತ್ತೇನೆ. ಈಗಾಗಲೇ ಗುರುತಿಸಲಾಗಿರುವ ನಿಪಿ.3 ರ ಭಾವಚಿತ್ರದಲ್ಲಿ ಸಾಕ್ಷಿಯು ತನ್ನನ್ನು ನೋಡಿ

ಗುರುತಿಸುತ್ತಾರೆ. ಸದರಿ ಭಾವಚಿತ್ರವನ್ನು ಎಲ್ಲಿ , ಯಾವ ವಿಚಾರಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ನನ್ನನ್ನು ವಿಚಾರಿಸಿರುವುದಿಲ್ಲ ಹಾಗೂ ನಾನು ನನ್ನ ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯು ಅಭಿಯೋಜಕರ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷಿ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲು ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕಃ22/05/2022 ರಂದು ಸಂಜೆ 4-40 ಗಂಟೆ ಸಮಯದಲ್ಲಿ ಕುಡಿನೆಲ್ಲಿ ಬಸ್ ಸ್ಟಾಪ್ ಬಳಿ ನಾನು ಹಾಗೂ ಚಾಸಾ 2 ರವರು ಇದ್ದಾಗ ಪೋಲಿಸರು ದಾಳಿಯ ವಿಚಾರವನ್ನು ತಿಳಿಸಿ ಪಂಚರನ್ನಾಗಿ ಸಹಕರಿಸಲು ಕೋರಿಕೊಂಡು ನಮ್ಮನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಸಂಜೆ 5-15 ಗಂಟೆ ಸಮಯದಲ್ಲಿ ಖಂಡಿಕಾ ಕಾಲೋನಿಗೆ ಬಂದು ಇಲಾಖಾ ಜೀಪನ್ನು ನಿಲ್ಲಿಸಿ ನಾವು ಹಾಗೂ ಪೋಲಿಸರು ಸ್ವಲ್ಪ ದೂರದಲ್ಲಿ ಶಾಲೆಯ ಪಕ್ಕದಲ್ಲಿ ಮರೆಯಲ್ಲಿ ನಿಂತಿರುತ್ತೇವೆ ಎಂದರೆ ಸರಿಯಲ್ಲ.

ಆಗ ನೋಡಿದಾಗ ಕುಮಾರ ಎಂಬುವವರ ಅಂಗಡಿಯ ಮುಂದೆ ಒಬ್ಬ ವ್ಯಕ್ತಿಯು 3-4 ಜನರಿದ್ದು ಅವರುಗಳಿಗೆ ವ್ಯಕ್ತಿಯೊಬ್ಬನು ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ಚಾಸಾ 1 ರವರು ತಯಾರಿಸಿರುವ ಶೋಧನಾ ವಾರಂಟಿಗೆ ನಾನು ಹಾಗೂ ಚಾಸಾ 2 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮದ್ಯವನ್ನು ಖರೀದಿಸಲು ಬಂದ ವ್ಯಕ್ತಿಗಳು ನಮ್ಮನ್ನು ನೋಡಿ ಓಡಿಹೋಗಿರುತ್ತಾರೆ ಎಂದರೆ ಸರಿಯಲ್ಲ. ಮದ್ಯ ಮಾರಾಟ ಮಾಡುತ್ತಿರುವ ವ್ಯಕ್ತಿಯನ್ನು ಪೋಲಿಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ನಮ್ಮ ಸಮಕ್ಷಮದಲ್ಲಿ ಪೋಲಿಸರು ವಿಚಾರಿಸಿದಾಗ ಆತನ ಹೆಸರು ಕುಮಾರ ಬಿನ್ ಕೃಷ್ಣಮೂರ್ತಿ,

ಅಂಗಡಿ ವ್ಯಾಪಾರ, ವಾಸಃಖಂಡಿಕಾ ಕಾಲೋನಿ, ಹಾಲ್ಮತ್ತೂರು ಗ್ರಾಮ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಮದ್ಯವನ್ನು ಮಾರಾಟ ಮಾಡಲು ಪರವಾನಿಗೆ ಇದೆಯೆ ಎಂದು ಕೇಳಿದಾಗ ಆತನು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭವನ್ನು ಪಡೆಯುವ ಸಲುವಾಗಿ ತಂದಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ವ್ಯಕ್ತಿಯ ವಶದಲ್ಲಿ ಇದ್ದ ಒಂದು ಕೈಚೀಲವನ್ನು ಪೋಲಿಸರು ನಮ್ಮ ಸಮಕ್ಷಮದಲ್ಲಿ ಪರಿಶೀಲಿಸಿದಾಗ ಅದರಲ್ಲಿ ಒರಿಜಿನಲ್ ಚಾಯ್ಸ್ ಡೆಲುಕ್ಸ್ ವಿಸ್ಕಿ 90 ಎಂ ಎಲ್ ನ 35 ತುಂಬಿದ ಟೆಟ್ರಾ ಪ್ಯಾಕೆಟುಗಳಿದ್ದು, ಸುಮಾರು 3.150 ಲೀಟರ್ ಇರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮದ್ಯ ಮಾರಾಟದಿಂದ ಬಂದಂತಹ ಹಣವನ್ನು ಹಾಜರುಪಡಿಸಲು ಕೇಳಿದಾಗ ಆತನು ತನ್ನ ಜೇಬಿನಿಂದ ರೂ.250/- ಗಳನ್ನು ನಮ್ಮ ಸಮಕ್ಷಮದಲ್ಲಿ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಪೋಲಿಸರು ಅಮಾನತುಪಡಿಸಿಕೊಂಡಿರುವ ಮದ್ಯವನ್ನು ರಾಸಾಯನಿಕ ತಜ್ಞರಿಗೆ ಕಳುಹಿಸುವ ಸಲುವಾಗಿ ಅದೇ ಕೈ ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ, ಹೆಚ್ ಎಂಬ ಮೊಹರಿನಿಂದ ಸೀಲ್ ಮಾಡಿ, ನಮ್ಮ ಹಾಗೂ ಚಾಸಾ 1 ರವರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರನ್ನು ಸಂಜೆ 5-30 ರಿಂದ 6-30 ಗಂಟೆಯವರೆಗೂ ಸ್ಥಳದಲ್ಲಿ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸ್ಥಳದಲ್ಲಿ ನಿಪಿ.3 ರಂತೆ ಭಾವಚಿತ್ರವನ್ನು ತೆಗೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಆ ಸಮಯದಲ್ಲಿ ಈಗ ನ್ಯಾಯಾಲಯದ ಮುಂದಿರುವ ಎಂಒ 1 ಅನ್ನು ಪೋಲಿಸರು ನಿಪಿ.1 ರಂತೆ ಮಹಜರ್ ಮೂಲಕ ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡು ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ನನ್ನನ್ನು ವಿಚಾರಿಸಿದಾಗ ನಾನು ನನ್ನ ಹೇಳಿಕೆಯನ್ನು ದಿನಾಂಕಃ26/05/2022 ರಂದು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ವಿವರವಾಗಿ ಓದಿ ಹೇಳಿದಂತೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪದ ಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು.

ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಯವರು ನಮ್ಮ ಊರಿನವರಾಗಿದ್ದರಿಂದ,

ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ದಿನಾಂಕಃ06/12/2024 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ